# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ಼ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1947/2023

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರದೀಪ್ | ಫ್ರಾಸಾ-12 |
| ತಂದೆಯ ಹೆಸರು | : ಕೃಷ್ಣೇಗೌಡ | ಚಾಸಾ-10 |
| ವಯಸ್ಸು | : 27 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕ಼26.12.2025 |
| ವಾಸಸ್ಥಳ | : ಕೂದುವಳ್ಳಿ | |

### :ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗೆ ಇಲ್ಲ. ಚಾಸಾ-2 ಮತ್ತು 9 ರವರ ಪರಿಚಯವೂ ಸಹ ನನಗಿಲ್ಲ.

ಸಾಕ್ಷಿಯು ನಿಪಿ-8ರ ಮಹಜರಿನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-10 ಮತ್ತು 11ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನಿಪಿ-8ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು.

2 ವರ್ಷದ ಹಿಂದೆ ಮೂಡಿಗೆರೆಯ ಮುದ್ರೆಮನೆ ಕಾಫಿ ಕ್ಯೂರಿಂಗ್ ಎದುರು ನಾನು ವಾಹನದಲ್ಲಿ ಬರುತ್ತಿರುವಾಗ ಪೊಲೀಸರು ನನ್ನನ್ನು ನಿಲ್ಲಿಸಿ ಯಾವುದೇ ಅಪಘಾತದ ಸಂಬಂಧ ಎಂದು ಹೇಳಿ ನನ್ನ ಸಹಿಯನ್ನು ಪಡೆದು, ಪೋಟೋಗಳನ್ನು ತೆಗೆದಿರುತ್ತಾರೆ. ಅಪಘಾತವು ಯಾವ ದಿನಾಂಕ ಹಾಗೂ ಯಾವ ವಾಹನಗಳ ನಡುವೆ ಆಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-8ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ಚಾಸಾ2 ಮತ್ತು 10 ರವರು ಹಾಜರಿದ್ದ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

### ಪಾಟೀ ಸವಾಲು: ಫ್ರಾಜ್ಞ್ಯಾಸ.ಸ.ಅ. ರವರಿಂದ:

ದಿ.12.08.2023 ರಂದು ಬೆಳಿಗೆ 10.30ರ ಸಮಯಕ್ಕೆ ಮೂಡಿಗೆರೆಯ ಮದ್ರಮನೆ ಕಾಫಿ ಕ್ಯೂರಿಂಗ್ ಎದುರು ಎನ್.ಹೆಚ್.73 ಟಾರು ರಸ್ತೆಯಲ್ಲಿ ಕೆಎ40 ಎಫ್-0506 ಕೆ.ಎಸ್.ಆರ್.ಟಿ.ಸಿ. ಬಸ್ ಹಾಗೂ ಕೆಎ-05-ಎನ್ಇ-9872 ವಾಹನಗಳ ನಡುವೆ ಅಪಘಾತವಾದ ಸ್ಥಳ ಇದೆ ಎಂದು ಚಾಸಾ2 ರವರು ನನ್ನ ಸಮಕ್ಷಮ ಪೊಲೀಸರಿಗೆ ಸ್ಥಳ ತೋರಿಸಿದಂತೆ ದಿನಾಂಕ.13.08.2023 ರಂದು ಮದ್ಯಾಹ್ನ 3.30 ರಿಂದ 4.30ರವರೆಗೂ ನಿಪಿ8ರಂತೆ ಸ್ಥಳ ಮಹಜರು ಕ್ರಮ ಜರುಗಿಸಿ ಅದೇ ಸಮಯಕ್ಕೆ ನಿಪಿ-10 ಮತ್ತು 11ರ ಪೋಟೋಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ಮಹಜರು ಕಾಲಕ್ಕೆ ನನ್ನೊಂದಿಗೆ ಚಾಸಾ10 ರವರು ಸಹ ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ.

ನನಗೆ ನಿಪಿ-8, 10 ಮತ್ತು 11ರ ಸಂಪೂರ್ಣ ವಿಚಾರಗಳು ತಿಳಿದಿದ್ದರೂ ಸಹ ಆರೋಪಿಗೆ

ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.